# ಕೈಯ ತೋರೋ ಕರುಣಿಗಳರಸನೆ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 15
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 202.
3. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 127. These wordings are almost similar to Ref. 1 but in different order. Hence they are not considered here.
4. **Note:** Lyrics given without highlights are as per Ref. 2. The wordings given separately in yellow highlights are as per Ref. 1. The wordings in Ref. 3 are mostly similar to Ref. 1 but in different order. Hence they are not considered here.
5. **Note:** Singer has followed lyrics as in Ref. 2.
6. **Note:** Ankita is different in both these books. We have considered Ref.1 as standard and taken that Ankita for listing.

ರಾಗ: ಮುಖಾರಿ ತಾಳ: ಆದಿ

ಕೈಯ ತೋರೋ ಕರುಣಿಗಳರಸನೆ, ಕೈಯ ತೋರೋ
ಕೈಯಲಿ ತುಂಬ ಬೆಣ್ಣೆಯ ಕೊಳ್ಳುವ ಕೈಯ ತೋರೋ || ಪ ||

ಅಂಗುಲಿಯೊಳು ಹೊನ್ನುಂಗುರವಿಟ್ಟ ಕೈಯ ತೋರೋ
ಅಂಗೈಯಲಿ ಧ್ವಜ ಪದ್ಮ ರೇಖೆಯ ಕೈಯ ತೋರೋ || ೧ ||

ಶೃಂಗಾರದ ಶಂಖ ಚಕ್ರವ ಪಿಡಿದ ಕೈಯ ತೋರೋ
ಅಂಗನೆಯರ ಕುಚಕುಂಭದೊಳಿರಿಸಿದ ಕೈಯ ತೋರೋ || ೨ ||

ಗೊಲ್ಲರ ಮನೆಯೊಳು ಬೆಣ್ಣೆಯ ಕದ್ದ ಕೈಯ ತೋರೋ
ಮಲ್ಲಿಗೆ ಜಾಜಿ ತುರುಬಿನೊಳಿಟ್ಟ ಕೈಯ ತೋರೋ || ೩ ||

ಖುಲ್ಲ ಪೂತನಿ ಅಸುವನೆ ಹೀರಿದ ಕೈಯ ತೋರೋ
ಮೆಲ್ಲನೆ ಕುಬುಜೆಯ ಡೊಂಕನು ತಿದ್ದಿದ ಕೈಯ ತೋರೋ || ೪ ||

ಕಡು ಹಿರಣ್ಯಾಕ್ಷನ ಒಡಲನೆ ಸೀಳಿದ ಕೈಯ ತೋರೋ
ದೃಢ ಪ್ರಹ್ಲಾದನ ಶಿರದೊಳಿಟ್ಟ ಕೈಯ ತೋರೋ || ೫ ||

ಬಡ ಬ್ರಾಹ್ಮಣನವಲಕ್ಕಿಯ ಬೇಡಿದ ಕೈಯ ತೋರೋ
ಕೊಡೆ ಮಾಡಿ ಗಿರಿ ಎತ್ತಿ ಗೋವ ಕಾಯ್ದ ಕೈಯ ತೋರೋ || ೬ ||

ಬಲಿಯನು ವಂಚಿಸಿ ದಾನವ ಬೇಡಿದ ಕೈಯ ತೋರೋ
ಒಲಿದು ಪಾರ್ಥಗೆ ಸಾರಥ್ಯ ಮಾಡಿದ ಕೈಯ ತೋರೋ || ೭ ||

ಲಲನೆಗೆ ಪಾರಿಜಾತವ ತಂದಿತ್ತ ಕೈಯ ತೋರೋ
ಮಲೆತ ಕ್ಷತ್ರಿಯ ಕುಲವನೆ ಸವರಿದ ಕೈಯ ತೋರೋ || ೮ ||

ಬಾಣಾಸುರನ ಬಾಹುಗಳರಿದ ಕೈಯ ತೋರೋ
ಭಾನುವ ಮರೆಮಾಡಿ ಭಾವನ ಕಾಯಿದ ಕೈಯ ತೋರೋ || ೯ ||

ಏಕ ಧ್ವನಿಯಲಿ ಕೊಳನೂದಿದ ಕೈಯ ತೋರೋ
ಆ ಕಾಳಿಂಗನ ಹಿಡಿದೆಳೆದಂಥಾ ಕೈಯ ತೋರೋ || ೧೦ ||

ಆಕಾಶದಲ್ಲಿದ್ದ ಚಂದ್ರನ ತೋರಿದ ಕೈಯ ತೋರೋ
ಶ್ರೀಕಾಂತ ಗುರು ಪುರಂದರ ವಿಠಲ ಕೈಯ ತೋರೋ || ೧೧ ||

Note: Below given lyrics are as per Ref. 1 above.

ರಾಗ: ಭೈರವಿ ತಾಳ: ಆದಿ

ಕೈಯ ತೋರೋ ಕರುಣಿಗಳರಸಾ, ಕೈಯ ತೋರೊ
ಕೈಯಲಿ ಬೆಣ್ಣೆಯ ಮುದ್ದೆಯ ನೀಡುವೆ ಕೈಯ ತೋರೊ || ಪ ||

ಅಂಗುಲಿಯೊಳು ಪೊನ್ನುಂಗುರವೊಪ್ಪುವ ಕೈಯ ತೋರೊ
ಶೃಂಗಾರದಿ ಶಂಖ ಚಕ್ರವ ಧರಿಸಿದ ಕೈಯ ತೋರೊ
ಅಂಗೈಯಲಿ ಧ್ವಜ ಪದ್ಮ ವಿರಾಜಿಪ ಕೈಯ ತೋರೊ
ಅಂಗನೆಯರ ಉತ್ತುಂಗ ಕುಚದಲಿಟ್ಟ ಕೈಯ ತೋರೊ || ೧ ||

ಬಡ ಬ್ರಾಹ್ಮಣನವಲಕ್ಕಿಯ ಬೇಡಿದ ಕೈಯ ತೋರೊ
ಕೊಡೆ ಮಾಡಿ ಗಿರಿಯೆತ್ತಿ ಗೋಗಳ ಕಾಯ್ದ ಕೈಯ ತೋರೊ
ಕಡು ಹಿರಣ್ಯಾಖ್ಯನ ಒಡಲನು ಬಗೆದ ಕೈಯ ತೋರೊ
ದೃಢ ಪ್ರಹ್ಲಾದನ ಮಂಡೆಯೊಳಿಟ್ಟ ಕೈಯ ತೋರೊ || ೨ ||

ಅಲ್ಲಿ ಪೂತನಿಯ ಅಸುವನೆ ಹೀರಿದ ಕೈಯ ತೋರೊ
ಬಲ್ಲಿದ ಮಲ್ಲರ ಮರ್ದಿಸಿ ಬಂದ ಕೈಯ ತೋರೊ
ಮೆಲ್ಲನೆ ಕುಬುಜೆಯ ಡೊಂಕನೆ ತಿದ್ದಿದ ಕೈಯ ತೋರೊ
ಬಿಲ್ಲನು ಎಡಗೈಯಲಿ ಮುರಿದಿಟ್ಟಾ ಕೈಯ ತೋರೊ || ೩ ||

ಬಲಿಯನು ವಂಚಿಸಿ ದಾನವ ಬೇಡಿದ ಕೈಯ ತೋರೊ
ಫಲ ಪುಷ್ಪ ಪಾರಿಜಾತವ ತಂದ ಕೈಯ ತೋರೊ
ಒಲಿದು ಪಾರ್ಥಗೆ ರಥವನು ನಡಸಿದ ಕೈಯ ತೋರೊ
ಮಲ್ಲಿಗೆ ಜಾಜಿಯ ತುರುಬಿಗೆ ಮುಡಿಸಿದ ಕೈಯ ತೋರೊ || ೪ ||

ಆಕಾಶದ ಚಂದ್ರಮನನು ಕರೆದ ಕೈಯ ತೋರೊ
ನಾಕ-ಪತಿಗೆ ಅಭಯವನಿತ್ತ ಕೈಯ ತೋರೊ, ಅ-
ನೇಕ ಬಗೆಯಲಿ ಕೊಳಲನೂದುವ ಕೈಯ ತೋರೊ
ಶ್ರೀಕಾಂತ ನಮ್ಮ ಪುರಂದರ ವಿಠ್ಠಲ ಕೈಯ ತೋರೊ || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಕೃಷ್ಣನನ್ನು ಕಂಡ ಗೋವಳಿಯೊಬ್ಬಳು ಇನ್ನೊಬ್ಬಳನ್ನು ಇವನಾರೆಂದು ಕೇಳುತ್ತಾ, ಅವನ ಅಂಗಾಂಗಗಳನ್ನು ಬಣ್ಣಿಸುತ್ತಾಳೆ.

ಕುಚಕುಂಭ = ದೊಡ್ಡದಾದ ಮತ್ತು ಧೃಡವಾದ ಮೊಲೆಗಳು

**ನರನಿಗೆ –** ಅರ್ಜುನನಿಗೆ.

**ಲಲನೆಗೆ –** ದೇವಲೋಕದಲ್ಲಿದ್ದ ಪಾರಿಜಾತವನ್ನು ಕಂಡು ಸತ್ಯಭಾಮೆಯು ಇದನ್ನು ದ್ವಾರಕೆಗೆ ತರಬೇಕೆಂದು ಕೃಷ್ಣನಿಗೆ ಸೂಚಿಸಲು, ಕೃಷ್ಣನು ಅದನ್ನು ಅಪಹರಿಸಿ ತಂದ ಕಥೆ ಭಾಗವತ, ಹರಿವಂಶ, ಭಾರತಗಳಲ್ಲಿದೆ.

**ಕೊಡೆ ಮಾಡಿ ...... ಕೈಯ ತೋರೊ =** ಗೊಲ್ಲರು ಇಂದ್ರ ಯಾಗ ಮಾಡಬೇಕೆಂದಿರುವಾಗ ಶ್ರೀ ಕೃಷ್ಣ ಆ ಯಾಗವನ್ನು ನಿಲ್ಲಿಸಿ, ಗೋವರ್ಧನ ಗಿರಿಯ ಪೂಜೆ ಮಾಡಿರೆಂದು ಹೇಳಿದನು. ಇದರಿಂದ ಇಂದ್ರನು ಸಿಟ್ಟಾಗಿ ಅತಿವೃಷ್ಟಿಯನ್ನು ಪ್ರಾರಂಭಿಸಿದಾಗ ಶ್ರೀ ಕೃಷ್ಣನು ಗೋವರ್ಧನ ಗಿರಿಯನ್ನು ಎತ್ತಿ ಹಿಡಿದು ಗೊಲ್ಲರನ್ನೂ ಮತ್ತು ಗೋವುಗಳನ್ನೂ ರಕ್ಷಿಸಿದನು.

**ಬಡ ಬ್ರಾಹ್ಮಣನವಲಕ್ಕಿ –** ಕೃಷ್ಣನ ಬಾಲ್ಯ ಸ್ನೇಹಿತನಾದ ಕುಚೇಲನು ತಂದುಕೊಟ್ಟ ಒಂದು ಹಿಡಿ ಅವಲಕ್ಕಿ.

**ಬಲ್ಲಿದ ಮಲ್ಲರ –** ಮಥುರೆಯಲ್ಲಿ ಕೃಷ್ಣನನ್ನು ಕೊಲ್ಲಲೆಂದು ಕಂಸನಿಂದ ಕಳುಹಿಸಲ್ಪಟ್ಟ ಚಾಣೂರ ಮುಷ್ಟಿಕರೆಂಬ ಮಲ್ಲರನ್ನು.

**ಬಿಲ್ಲನು ಎಡಗೈಯಿಂದಲಿ –** ಮಥುರೆಯಲ್ಲಿ ಕಂಸನು ನಡೆಯಿಸಿದ ಬಿಲ್ಲು ಹಬ್ಬದ ಸಂದರ್ಭದಲ್ಲಿ, ಪರಶುರಾಮನ ಬಿಲ್ಲನ್ನು ಕೃಷ್ಣನು ಎಡಗೈಯಿಂದಲೇ ಎತ್ತಿ ಮುರಿದದ್ದು ಹರಿವಂಶದಲ್ಲಿ ಬಂದಿದೆ (2,27).

**ನಾಕಪತಿಗಳಿಗೆ ಅಭಯವನೀವ –** ಗೋವರ್ಧನೋದ್ಧರಣ ಸಂದರ್ಭದಲ್ಲಿ, ಇಂದ್ರನ ಆಟಾಟೋಪ ನಡೆಯದಿರಲು ಇಂದ್ರನು ತನ್ನ ಉದ್ದಂಡತನಕ್ಕಾಗಿ ಮರುಗಿ ಕೃಷ್ಣನ ಬಳಿ ಬಂದು ಮನ್ನಿಸಬೇಕೆಂದು ಬೇಡಿಕೊಳ್ಳಲು ಕೃಷ್ಣನು ಅವನಿಗೆ ಅಭಯವನ್ನಿತ್ತು ಕಳುಹಿಸಿದ್ದು ಭಾಗವತದಲ್ಲಿದೆ (10–27).

**Classification:** Keerthane
**Ankita:** purandara vittala
**Location:** NA
**Category:** Krishna Leele,
**Sub-Category:** kai, karuna, arasa, benne, ungura, dhwaja, padma, shankha, chakra, brahmana, parvata, asura, putani, prahallada, billu, bali, dAna, phala, pushpa, parijatha, mallige, akasha, Chandra, kolalu, srikanta, nara,
**Pravachana:** NA
**Explanation:** NA